# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 28 (35) |
| ಉತ್ತರಿಸುವ ಸಚಿವರು | : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 27-01-2026 |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನೇಕಾರರ ಸಮ್ಮಾನ್ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (DBT) ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು); | ರಾಜ್ಯದಲ್ಲಿ ನೇಕಾರರ ಸಮ್ಮಾನ್ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ನೇಕಾರರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (DBT) ಮಾಡಲಾದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಿದೆ. |
| ಆ) | ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಘೋಷಿಸಲಾದ ಮೆಗಾ ಟೆಕ್ಸ್ಟೈಲ್ ಪಾರ್ಕ್‌ಗಳ ಪ್ರಗತಿ ಯಾವ ಹಂತದಲ್ಲಿದೆ; ಇವುಗಳಿಂದ ಎಷ್ಟು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ; | ಕೇಂದ್ರ ಸರ್ಕಾರದ Prime Minister's Mega Integrated Textile Region and Apparel Park (PM-MITRA) ಯೋಜನೆಯಡಿ ದೇಶಾದ್ಯಂತ 7 ಮೆಗಾ ಜವಳಿ ಪಾರ್ಕ್ ಗಳನ್ನು ಸ್ಥಾಪಿಸುವುದಾಗಿ ಮಾನ್ಯ ಕೇಂದ್ರ ಹಣಕಾಸು ಸಚಿವರು 2021-22 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ. ಕಲಬುರಗಿ ಮತ್ತು ವಿಜಯಪುರ ಜಿಲ್ಲೆಯ ಮುಳವಾಡ ಕೈಗಾರಿಕಾ ವಸಾಹತು ಪ್ರದೇಶದಲ್ಲಿ PM-MITRA ಯೋಜನೆಯಡಿ ಜವಳಿ ಪಾರ್ಕ್ ಅನ್ನು ಸ್ಥಾಪಿಸಲು ಪ್ರಾಥಮಿಕ ಯೋಜನಾ ವರದಿ (PPR) ಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ:08.03.2022 ರಂದು ಸಲ್ಲಿಸಲಾಗಿರುತ್ತದೆ.<br><br>ವಿಜಯಪುರ ಜಿಲ್ಲೆಯ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪ್ರಾಥಮಿಕ ಯೋಜನಾ ವರದಿ (PPR) ಯನ್ನು ದಿನಾಂಕ:15.06.2022 ರಂದು ಅನುಮೋದನೆ ಕೋರಿ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br><br>ಕಲಬುರಗಿ ಜಿಲ್ಲೆಯಲ್ಲಿ PM-MITRA ಮೆಗಾ ಜವಳಿ ಪಾರ್ಕ್ ನ್ನು ಅನುಷ್ಠಾನಗೊಳಿಸಲು ಸನ್ಮಾನ್ಯ ಪ್ರಧಾನಮಂತ್ರಿಗಳು ದಿನಾಂಕ:17.03.2023 ರಂದು ಘೋಷಿಸಿರುತ್ತಾರೆ. ಮುಂದುವರೆದು, 1000 ಎಕರೆ ಜಮೀನನ್ನು ಇದೇ ಉದ್ದೇಶಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಸ್ಥಾಪಿಸಿರುವ ಎಸ್.ಪಿ.ವಿ ಹೆಸರಿಗೆ ವರ್ಗಾಯಿಸಿ Enivonmental Clearance (EC) ಯನ್ನು ದಿನಾಂಕ:27.10.2025 ರಂದು ಪಡೆದಿದ್ದು, ಕೇಂದ್ರ ಸರ್ಕಾರದ Public Private Partnership Appraisal Committee (PPPAC) ಅನುಮೋದನೆ ಬಾಕಿ ಇದ್ದು, ಅನುಮೋದನೆ ನಂತರ Master Developer ಜಾಗತಿಕ ಮಟ್ಟದಲ್ಲಿ ಆಯ್ಕೆ ಮಾಡಲು ಯೋಜನೆ ಪ್ರಗತಿಯಲ್ಲಿದೆ. |

...2

| | | |
|---|---|---|
| | | ಮುಂದುವರೆದು, ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ನೀರು (ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್) ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು (ರೂ.150.00 ಕೋಟಿಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ಯಿಂದ ಭರಿಸತಕ್ಕದ್ದು ಹಾಗೂ ಬಾಕಿ ಮೊತ್ತವನ್ನು ರಾಜ್ಯ ಸರ್ಕಾರದ ಆಯವ್ಯಯದಿಂದ ಭರಿಸತಕ್ಕದ್ದು) ಎಂದು ದಿನಾಂಕ:17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ:CI 170 JAKE 2019 (P-5), ದಿನಾಂಕ:03.10.2024 ರಲ್ಲಿ ನೀಡಿದೆ. ಅದರಂತೆ 2024-25 ನೇ ಸಾಲಿನ & 2025-26ನೇ ಸಾಲಿನ ಕ.ಕ.ಪ್ರ.ಅ ಮಂಡಳಿಯ ಕಲಬುರಗಿ ಜಿಲ್ಲೆಯ ಮ್ಯಾಕ್ರೋ ಯೋಜನೆ ಅಡಿಯಲ್ಲಿ ಮಂಜೂರಾತಿ ನೀಡಿದ ಕಾಮಗಾರಿಗಳಿಗೆ ನಿಗಧಿಪಡಿಸಿದ ಅನುದಾನ ರೂ.50.90 ಕೋಟಿಗಳ ಪೈಕಿ ರೂ.45.81 ಕೋಟಿಗಳು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ. |
| ಇ) | ನೂತನ ಜವಳಿ ನೀತಿಯಡಿ ಸಣ್ಣ ಪ್ರಮಾಣದ ಜವಳಿ ಘಟಕಗಳಿಗೆ ನೀಡಬೇಕಾದ ಬಂಡವಾಳ ಸಬ್ಸಿಡಿ ಬಾಕಿ ಎಷ್ಟಿದೆ; ಇದನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನೂತನ ಜವಳಿ ನೀತಿಯ ವಿವಿಧ ಕಾಂಪೊನೆಂಟ್ (ಪ್ರೋತ್ಸಾಹನ ಮತ್ತು ರಿಯಾಯಿತಿ) ಗಳಡಿ ಸಣ್ಣ ಪ್ರಮಾಣದ ಒಟ್ಟು 81 ಜವಳಿ ಘಟಕಗಳಿಗೆ ಡಿಸೆಂಬರ್-2025 ಅಂತ್ಯದವರೆಗೆ ರೂ.121,55,88,198/-ಗಳು ಬಿಡುಗಡೆಗೆ ಬಾಕಿಯಿದ್ದು, ಕ್ರಮ ಕೈಗೊಳ್ಳಲಾಗುತ್ತಿದೆ. ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ. |

**ಸಂಖ್ಯೆ: CI 14 JAKE 2026**

(ಶಿವಾನಂದ ಎಸ್. ಪಾಟೀಲ)

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು